ದಿಃ **28.07.2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಕೆ ವಕೀಲರಿಂದಃ

ಸಾಕ್ಷಿಯು ತಾವು ಹಾಜರುಪಡಿಸಿರುವ ಆರ್ ಟಿ ಐ ಕಾಯ್ದೆ ಅಡಿಯಲ್ಲಿ ಸಂಬಂದಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಪಡೆದುಕೊಂಡಿರುವ ದೃಢೀಕೃತ ನಕಲಿನ ಡೀಡ್ ಆಫ್ ರಿಲೀಸ್ ಎಂದು ಹಾಜರುಪಡಿಸಿದ್ದು ಇದಕ್ಕೆ ಶ್ರೀ ಎನ್ ಕೆ ವಕೀಲರು ಸದ್ರಿ ದಾಖಲೆಯನ್ನು ಆರ್ ಟಿ ಐ ಅಡಿಯಲ್ಲಿ ತೆಗೆದುಕೊಂಡಿರುವ ಕಾರಣ ಸದ್ರಿ ದಾಖಲೆಯು ದೃಢೀಕೃತ ನಕಲು ಆಗುವುದಿಲ್ಲ ಆದ್ದರಿಂದ ನಿಶಾನೆ ಮಾಡಲಾಗುವುದಿಲ್ಲ ಎಂದು ತಕರಾರು ಸಲ್ಲಿಸಿದ್ದಾರೆ.

ಸಾಕ್ಷಿಯು ಆರ್ ಟಿ ಐ ಕಾಯ್ದೆ ಅಡಿಯಲ್ಲಿ ಸಂಬಂದಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಪಡೆದುಕೊಂಡಿರುವ ಒಪ್ಪಿಗೆ ಪತ್ರಗಳು ಎಂದು ಹಾಜರುಪಡಿಸಿದ್ದು ಸಾಕ್ಷಿಯು ಸದ್ರಿ ಒಪ್ಪಿಗೆ ಪತ್ರಗಳನ್ನು ಜಯಂತಿ ಅವರ ಮಕ್ಕಳು ಪ್ರತಿವಾದಿ **4** ರವರ ಪರವಾಗಿ ಬರೆದುಕೊಟ್ಟಿರುವ ಒಪ್ಪಿಗೆ ಪತ್ರಗಳು ಎಂದು ಹಾಜರುಪಡಿಸಿದ್ದು ಇದಕ್ಕೆ ಶ್ರೀ ಎನ್ ಕೆ ವಕೀಲರು ಸದ್ರಿ ದಾಖಲೆಯನ್ನು ಆರ್ ಟಿ ಐ ಅಡಿಯಲ್ಲಿ ತೆಗೆದುಕೊಂಡಿರುವ ಕಾರಣ ಸದ್ರಿ ದಾಖಲೆಯು ದೃಢೀಕೃತ ನಕಲು ಆಗುವುದಿಲ್ಲ ಆದ್ದರಿಂದ ನಿಶಾನೆ ಮಾಡಲಾಗುವುದಿಲ್ಲ ಎಂದು ತಕರಾರು ಸಲ್ಲಿಸಿದ್ದಾರೆ.

ಆರ್ ಟಿ ಐ ಕಾಯ್ದೆ ಅಡಿಯಲ್ಲಿ ಸಂಬಂದಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಪಡೆದುಕೊಂಡಿರುವ ಜಯಂತಿ ಪುತ್ರನ್ ಅವರ ಆಧಾರ್ ಕಾರ್ಡ್ ಎಂದು ಹಾಜರುಪಡಿಸಿದ್ದು ಇದಕ್ಕೆ ಶ್ರೀ ಎನ್ ಕೆ ವಕೀಲರು ಸದ್ರಿ ದಾಖಲೆಯನ್ನು ಆರ್ ಟಿ ಐ ಅಡಿಯಲ್ಲಿ ತೆಗೆದುಕೊಂಡಿರುವ ಕಾರಣ ಸದ್ರಿ ದಾಖಲೆಯು ದೃಢೀಕೃತ ನಕಲು ಆಗುವುದಿಲ್ಲ ಆದ್ದರಿಂದ ನಿಶಾನೆ ಮಾಡಲಾಗುವುದಿಲ್ಲ ಎಂದು ತಕರಾರು ಸಲ್ಲಿಸಿದ್ದಾರೆ. ಶ್ರೀ ಎನ್ ಕೆ ವಕೀಲರ ತಕರಾರನ್ನು ಕಡತದ ಮೇಲೆ ತೆಗೆದುಕೊಳ್ಳಲಾಗಿರುತ್ತದೆ, ದಾಖಲೆಗಳನ್ನು ಪರಿಶೀಲಿಸಿ ಮತ್ತು ಸದ್ರಿ ವಕೀಲರ ಮನವಿಯನ್ನು ಪರಿಶೀಲಿಸಿ ಸಾಕ್ಷಿಯ ಪಾಟೀಸವಾಲಿಗೆ ದಾಖಲೆಗಳ ಸತ್ಯಾಸತ್ಯತೆ ಬಗ್ಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ಇರುವುದರಿಂದ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಬಹುದಾಗಿರುವುದರಿಂದ ಶ್ರೀ ಎನ್ ಕೆ ವಕೀಲರ ತಕರಾರಿಗೆ ಒಳಪಡಿಸಿ ಸದ್ರಿ ದಾಖಲೆಗಳನ್ನು ಅನುಕ್ರಮವಾಗಿ -

**1.** ಆರ್ ಟಿ ಐ ಕಾಯ್ದೆ ಅಡಿಯಲ್ಲಿ ಸಂಬಂದಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಪಡೆದುಕೊಂಡಿರುವ ದೃಢೀಕೃತ ನಕಲಿನ ಡೀಡ್ ಆಫ್ ರಿಲೀಸ್ ಹಾಜರುಪಡಿಸಿದ್ದು ಅದನ್ನು ನಿ.ಪಿ**-15** ಎಂದು ಗುರುತಿಸಲಾಯಿತು.

**2.** ಆರ್ ಟಿ ಐ ಕಾಯ್ದೆ ಅಡಿಯಲ್ಲಿ ಸಂಬಂದಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಪಡೆದುಕೊಂಡಿರುವ ಒಪ್ಪಿಗೆ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ**-16** ಮತ್ತು ನಿ.ಪಿ**-17** ಎಂದು ಗುರುತಿಸಲಾಯಿತು.

**3.** ಆರ್ ಟಿ ಐ ಕಾಯ್ದೆ ಅಡಿಯಲ್ಲಿ ಸಂಬಂದಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಪಡೆದುಕೊಂಡಿರುವ ಜಯಂತಿ ಪುತ್ರನ್ ಅವರ ಆಧಾರ್ ಕಾರ್ಡ್ ಹಾಜರುಪಡಿಸಿದ್ದು ಅದನ್ನು ನಿ.ಪಿ**-18** ಎಂದು ಗುರುತಿಸಲಾಯಿತು.

**4.** ಆನಂದ ವೈ ಪುತ್ರನ್ ಅವರ ಮರಣ ಪ್ರಮಾಣಪತ್ರ ಹಾಜರುಪಡಿಸಿದ್ದು ಇದಕ್ಕೆ ಶ್ರೀ ಎನ್ ಕೆ ವಕೀಲರು ಸಂಬಂದಪಟ್ಟ ಉಡುಪಿ ನಗರಸಭೆಯಿಂದ ಪಡೆದುಕೊಂಡಿರುವ ಕಾರಣ, ಪಾಟೀಸವಾಲಿಗೆ ಅವಕಾಶಕ್ಕೆ ಒಳಪಡಿಸಿ ನಿಶಾನೆ ಮಾಡಬಹುದೆಂದು, ಅದನ್ನು ನಿ.ಪಿ**-19** ಎಂದು ಗುರುತಿಸಲಾಯಿತು.

**5.** ಜಯಂತಿ ಪುತ್ರನ್ ಅವರ ಮರಣ ಪ್ರಮಾಣಪತ್ರ ಹಾಜರುಪಡಿಸಿದ್ದು ಇದಕ್ಕೆ ಶ್ರೀ ಎನ್ ಕೆ ವಕೀಲರು ಸಂಬಂದಪಟ್ಟ ಉಡುಪಿ ನಗರಸಭೆಯಿಂದ ಪಡೆದುಕೊಂಡಿರುವ ಕಾರಣ, ಪಾಟೀಸವಾಲಿಗೆ ಅವಕಾಶಕ್ಕೆ ಒಳಪಡಿಸಿ ನಿಶಾನೆ ಮಾಡಬಹುದೆಂದು, ಅದನ್ನು ನಿ.ಪಿ**-20** ಎಂದು ಗುರುತಿಸಲಾಯಿತು.

**6.** ಜಯಂತಿ ಪುತ್ರನ್ ಅವರ ಕುಟುಂಬ ಪಡಿತರ ಚೀಟಿ ಹಾಜರುಪಡಿಸಿದ್ದು ಅದನ್ನು ನಿ.ಪಿ**-21** ಎಂದು ಗುರುತಿಸಲಾಯಿತು.

**7. 3** ನೇ ವಾದಿ ತೆಂಕ ಪಿಡಿಒ ಅವರಿಗೆ ಬರೆದಿರುವ ಪತ್ರದ ಇನ್ನೊಂದು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ**-22** ಎಂದು ಗುರುತಿಸಲಾಯಿತು.

**8.** ಉಡುಪಿ ಜಿಲ್ಲಾ ಆಸ್ಪತ್ರೆ, ಫಿಸಿಶಿಯನ್ ಅವರಿಂದ ಪಡೆದಿರುವ ಜಯಂತಿ ಪುತ್ರನ್ ಅವರಿಗೆ ಸಂಬಂಧಿಸಿದಂತೆ ದೃಢೀಕರಣ ಪತ್ರ ಇದನ್ನು ಶ್ರೀ ಎನ್ ಕೆ ವಕೀಲರ ಆಕ್ಷೇಪಕ್ಕೆ ಒಳಪಡಿಸಿ ಅದನ್ನು ನಿ.ಪಿ**-23** ಎಂದು ಗುರುತಿಸಲಾಯಿತು.

**9.** ಜಯಂತಿ ಎ ಪುತ್ರನ್ ಅವರಿಗೆ ಸಂಬಂದಪಟ್ಟ ಆದರ್ಶ ಆಸ್ಪತ್ರೆಯಿಂದ ಪಡೆದಿರುವ **18** ಪುಟಗಳು ಒಳಗೊಂಡಿದ್ದ ಲ್ಯಾಬ್ ರಿಪೋರ್ಟ್ಸ್ ಹಾಜರುಪಡಿಸಿದ್ದು ಶ್ರೀ ಎನ್ ಕೆ ವಕೀಲರ ಆಕ್ಷೇಪಕ್ಕೆ ಒಳಪಡಿಸಿ ಅವುಗಳನ್ನು ಒಟ್ಟಾಗಿ ನಿ.ಪಿ-**24** ಎಂದು ಗುರುತಿಸಲಾಯಿತು.

**10.** ಎಸ್ ಡಿ ಎಂ ಆಯುರ್ವೇದ ಆಸ್ಪತ್ರೆ, ಕುತ್ಪಾಡಿ, ಉಡುಪಿಯ **2** ಸಲಹಾ ಚೀಟಿ ಮತ್ತು **1** ಬಿಲ್ಲು ಹಾಜರುಪಡಿಸಿದ್ದು ಶ್ರೀ ಎನ್ ಕೆ ವಕೀಲರ ಆಕ್ಷೇಪಕ್ಕೆ ಒಳಪಡಿಸಿ ಅವುಗಳನ್ನು ಒಟ್ಟಾಗಿ ನಿ.ಪಿ-**25** ಎಂದು ಗುರುತಿಸಲಾಯಿತು.

ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸೂಕ್ತ ಕಾರಣ ನೀಡಿಲ್ಲ ಆದ್ದರಿಂದ ಇಲ್ಲಎಂದು ತೆಗೆದುಕೊಳ್ಳಲಾಯಿತು. ಸಾಕ್ಷಿಯ ಪಾಟೀಸವಾಲಿಗೆ ಶ್ರೀ ಎನ್ ಕೆ ವಕೀಲರು ಸಮಯ ಕೋರಿದ್ದಾರೆ, ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ